ಸಾಕ್ಷಿಯನ್ನು 30.03.2023 ರಂದು ಕರೆಸಿ ಪ್ರಮಾಣವಚನ ಮಾಡಿಸಲಾಯಿತು. ಪಿ.ಡಬ್ಲ್ಯೂ-1

ಮುಂದುವರಿದ ಪಾಟೀ ಸವಾಲುಃ 2 ನೇ ಪ್ರತಿವಾದಿಪರ ವಕೀಲರಿಂದಃ

1. ನಾನು ಮಂಡ್ಯ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಆರ್ ಮಿಸ್ 236/16 ನ್ನು ಹಾಕಿದ್ದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಉಪವಿಭಾಗಾಧಿಕಾರಿಗಳು ವ್ಯಾಜ್ಯವನ್ನು ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಿ ಎಂದು ಆದೇಶ ಮಾಡಿರುತ್ತಾರೆ. ಸದರಿ ಆದೇಶದಲ್ಲಿ ಉಪವಿಭಾಗಾಧಿಕಾರಿಗಳು ತಹಶಿಲ್ದಾರ್ ರವರು ಉಭಯಪಕ್ಷಗಾರರ ಅನುಮತಿ ಮೇರೆಗೆ ಖಾತೆಯನ್ನು ಪ್ರತಿವಾದಿಗಳ ಹೆಸರಿಗೆ ಮಾಡಿರುವುದು ಸರಿ ಇದೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು 2000 ನೆ ಇಸವಿಯಲ್ಲಿ ಗೂಡಲೂರು , ನೀಲಗಿರಿ ಜಿಲ್ಲಯಲ್ಲಿ ತಹಶಿಲ್ದಾರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಆ ಸಂದರ್ಭದಲ್ಲಿ ನನ್ನ ತಮ್ಮ 3 ನೇ ಪ್ರತಿವಾದಿ ಮಾರಾಟ ಮಾಡಿರುವುದಕ್ಕೆ ಒಪ್ಪಿಗೆ ನೀಡಿದ್ದೆ ಎಂದರೆ ಸರಿಯಲ್ಲ.

2. ದಿಃ 18.7.2000 ಇಸವಿಯಲ್ಲಿ ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ನನಗೆ ನಾನು ಆಸ್ತಿಗಳನ್ನು ನೋಡಿಕೊಳ್ಳಲು ಆಗುವುದಿಲ್ಲ ಏಕೆಂದರೆ ನಾನು ದಾವಾಸ್ವತ್ತುಗಳಿಂದ ದೂರ ಇದ್ದು ಬೇರೆಕಡೆ ಕೆಲಸ ಮಾಡುತ್ತಿರುವುದರಿಂದ ನಾನು ದಾವಾ ಸ್ವತ್ತುಗಳಲ್ಲಿ ನನ್ನ ಭಾಗವನ್ನು ನನ್ನ ತಮ್ಮಂದಿರಾದ ಮಹದೇವ ಮತ್ತು ಜಯರಾಮುರವರಿಗೆ ಕೊಡಲು ನಿರ್ಧಾರ ಮಾಡಿರುತ್ತೇನೆ ಎಂದು ಪ್ರಮಾಣಪತ್ರವನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸಾಕ್ಷಿ ಸದರಿ ಪ್ರಮಾಣಪತ್ರದ ಜೆರಾಕ್ಸ ಪ್ರತಿಯನ್ನು ನೋಡಿ ಅದನ್ನು ಅಲ್ಲಗಳೆದಿರುತ್ತಾರೆ. ಸಾಕ್ಷಿ ಮುಂದುವರಿದು ಸದರಿ ದಾಖಲೆ ಮೂಲಪ್ರತಿ ಆಗಿರುವುದಿಲ್ಲ ಎಂದು ನುಡಿದಿರುತ್ತಾರೆ. 2 ನೇ ಪ್ರತಿವಾದಿ ಅನಕ್ಷರಸ್ಥರಾಗಿರುವುದರಿಂದ ಪ್ರಮಾಣಪತ್ರದ ಮೂಲಪ್ರತಿಯನ್ನು ನಾನೆ ಇಟ್ಟುಕೊಂಡು ಜೆರಾಕ್ಸ್ ಪ್ರತಿಯನ್ನು ಪ್ರತಿವಾದಿಗಳಿಗೆ ನೀಡಿರುತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳನ್ನು ನಂಬಿಸಿ ಅವರಿಗೆ ಪ್ರಮಾಣಪತ್ರವನ್ನು ಬರೆದುಕೊಟ್ಟು ಅದರ ಜೆರಾಕ್ಸ್ ಪ್ರತಿಯನ್ನು ಮಾತ್ರ ಅವರಿಗೆ ನೀಡಿ, ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಕ್ರಯಮಾಡಲು ಅನುಮತಿ ಕೊಟ್ಟು ಈಗ ಈ ಸುಳ್ಳು ದಾವೆಯನ್ನು ಪ್ರತಿವಾದಿಗಳ ವಿರುದ್ದ ಸಲ್ಲಿಸಿದ್ದೇನ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ಇರುವ ನನ್ನ ಭಾಗಾಂಶವನ್ನು 3 ನೆ ಪ್ರತಿವಾದಿಗೆ ಬಿಟ್ಟುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಎಲ್ಲ ಸ್ವತ್ತುಗಳು ಭಾಗ ಆಗಿದ್ದರು ಕೂಡ

3ನೆ ಪ್ರತಿವಾದಿ ಜೊತೆಗೆ ಸೇರಿ 1 ಮತ್ತು 2ನೆ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

3. ತಮಿಳುನಾಡು ಸರ್ಕಾರಕ್ಕೆ ನಾನು ನನ್ನ ಚರಾಸ್ತಿ ಮತ್ತು ಸ್ಥಿರಾಸ್ತಿಗಳ ಘೋಷಣೆ ಬಗ್ಗೆ ನೀಡಿರುವ ದಾಖಲೆಗಳನ್ನು ಈಗ ನ್ಯಾಯಾಲಯಕ್ಕೆ ಹಾಜರುಪಡಿಸಲು ಆಗುವುದಿಲ್ಲ. ನಾನು ನಿವೃತ್ತಿ ಹೊಂದಿದ್ದು ಎಲ್ಲ ದಾಖಲೆಗಳು ಸರ್ಕಾರದ ಬಳಿ ಇರುವುದರಿಂದ ಅವುಗಳನ್ನು ನಾನು ಹಾಜರುಪಡಿಸಲು ಆಗುವುದಿಲ್ಲ. ನಾನು ಅವುಗಳ ದೃಢೀಕೃತ ನಕಲುಗಳನ್ನು ಕೇಳಿದರೆ ಕೊಡುತ್ತಾರೆ ಎಂದರೆ ಸಾಕ್ಷಿ ಅದು ತುಂಬಾ ಕಷ್ಟ ಆಗುತ್ತದೆ ಎಂದು ನುಡಿದಿದ್ದಾರೆ. ನನ್ನ ಚರಾಸ್ತಿ , ಸ್ಥಿರಾಸ್ತಿಗಳ ಘೋಷಣೆಯಲ್ಲಿ ನಾನು ನನ್ನ ತಂದೆಗೆ ಸೇರಿದ ಸ್ವಯಾರ್ಜಿತ ಆಸ್ತಿಗಳ ಬಗ್ಗೆ ತಿಳಿಸಿದ್ದು ಅದನ್ನು ಹಾಜರುಪಡಿಸಿದರೆ ಈ ದಾವೆಗೆ ತೊಂದರೆಯಾಗುತ್ತದೆ ಎಂದು ಅವುಗಳನ್ನು ಹಾಜರುಪಡಿಸಲು ಆಗುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮಕುಟುಂಬದಲ್ಲಿ ವಿಭಾಗ ಆಗಿದ್ದರು ಕೂಡ , ಎಲ್ಲ ಆಸ್ತಿಗಳನ್ನು ಸೇರಿಸದೆ ಮತ್ತು ಎಲ್ಲ ಅಗತ್ಯ ಪಕ್ಷಗಾರರನ್ನು ದಾವೆಯಲ್ಲಿ ಸೇರಿಸದೆ 2 ನೆ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸಿದ ನಂತರ 2ನೆ ಪ್ರತಿವಾದಿ ದಾವಾ ಆಸ್ತಿ 1 ಐಟಂ ಅನ್ನು ಇವತ್ತಿನ ಮಾರುಕಟ್ಟೆ ಬೆಲೆಗೆ ನನಗೆ ಮಾರಾಟ ಮಾಡಲು ತಯಾರಿದ್ದೇನೆ ಎಂದು ತಿಳಿಸಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿ 2 ರವರಿಂದ ದಾವಾ ಆಸ್ತಿ ಐಟಂ ನಂ.1ನ್ನು ಅಕ್ರಮವಾಗಿ ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.

ಪಿ.ಸಿ.ಜೆ. ಮತ್ತು ಜೆಎಂಎಫ್‌ಸಿ,
ಮಳವಳ್ಳಿ